ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

OFFICE OF THE DEPUTY TAHASILDAR, THAMBRAHALLI-583224

ಎ.ವಿಲೇ.ನಂ.ಕಂ.ಪಹಣಿ.ವಿವಾದ/03/2016 17 ದಿನಾಂಕ:27.10.2016

ಉಪತಶೀಲ್ದಾರರು: *ಶ್ರೀ ನಾಗರಾಜ. ಹೆಚ್.*
*ಉಪತಹಶೀಲ್ದಾರರು*
*ನಾಡ ಕಛೇರಿ ತಂಬ್ರಹಳ್ಳಿ*

| ವಾದಿ (ಶ್ರೀ/ಶ್ರೀಮತಿ) | ಪ್ರತಿವಾದಿ (ಶ್ರೀ/ಶ್ರೀಮತಿ) |
|---|---|
| ಡಂಬ್ರಹಳ್ಳಿ ಶಂಕ್ರಗೌಡ ತಂದೆ ಡಿ. ನಿಂಗನಗೌಡ ವಾಸ ಶೀಗೇನಹಳ್ಳಿ ಗ್ರಾಮ -2, ಹಬೊ ಹಳ್ಳಿ ತಾಲೂಕು | ಟಿ. ತ್ರಿವೇಣಿ ಗಂಡ ತಿಪ್ಪಣ್ಣ ವಾಸ ಶೀಗೇನಹಳ್ಳಿ ಗ್ರಾಮ ಹಬೊ ಹಳ್ಳಿ ತಾಲೂಕು |

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಶೀಗೇನಹಳ್ಳಿ | 150/ಬಿ ಪೈಕಿ | 2.30 |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಶೀಗೇನಹಳ್ಳಿ ಗ್ರಾಮದ ಸ.ನಂ.150/ಬಿ ಪೈಕಿ ವಿಸ್ತೀರ್ಣ 2.30 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕ್ರಯ ನೊಂದಣಿ ದಸ್ತಾವೇಜು ಮೇರಗೆ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್.12/2015-16 ರಲ್ಲಿ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:28.07.2016 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಮನವಿ ಮೇರೆಗೆ ವ್ಯಾಜ್ಯದ ಜಮೀನು ಮೂಲತಃ ಟಿ ಹನುಮಂತಪ್ಪ ಇವರ ಮಕ್ಕಳಾದ 1. ಟಿ.ತಿಪ್ಪಣ್ಣ 2. ಟಿ.ದೊಡ್ಡಬಸಪ್ಪ, 3. ಟಿ.ಮಂಜಪ್ಪ ಮತ್ತು 4. ಟಿ ಪಕ್ಕೀರಜ್ಜ ಇವರುಗಳ ಹೆಸರಿಗೆ ಜಂಟಿಯಾಗಿ ಖಾತೆ ಇದ್ದು, ಸದರಿಯವರು ಒಟ್ಟುಗೂಡಿ ದಿನಾಂಕ:13.05.2016 ರಂದು ನೋಂದಾಯಿತ ಕ್ರಯ ನೊಂದಣಿ ದಸ್ತಾವೇಜು ಸಂಖ್ಯೆ 494/2016-17 ರ ಮೂಲಕ ವಾದಿಗಳ ಹೆಸರಿಗೆ ಕ್ರಯಕ್ಕೆ ನೀಡಿದ್ದು ಸದರಿ ಕ್ರಯ ನೊಂದಣಿ ದಸ್ತಾವೇಜು ಪ್ರಕಾರ ಕ್ರಯದಾರರಾದ ವಾದಿಗಳ ಹೆಸರಿಗೆ ಖಾತೆ ಮಾಡುವಂತೆ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು ದಿ:18.06.2016 ರಂದು ಪ್ರಶ್ನಿತ ಹಕ್ಕುಬದಲಾವಣೆಗೆ ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ. ಸದರಿಯವರ ಪ್ರಕಾರ ವ್ಯಾಜ್ಯದ ಜಮೀನು ತನ್ನ ಪತಿಯಾದ ಶ್ರೀ ಟಿ.ತಿಪ್ಪಣ್ಣ ತಂದೆ ಲೇಟ್ ಟಿ.ಹನುಮಂತಪ್ಪ ಇವರ ಹೆಸರಿನಲ್ಲಿ ಜಂಟಿ ಖಾತೆ ಇದ್ದು ಸದರಿಯವರು ದಿನಾಂಕ:15.06.2016 ರ ರಂದು ಮರಣಹೊಂದಿದ್ದು ಪ್ರಸ್ತುತ ಜಮೀನಿನಲ್ಲಿ ತನಗೂ ಹಕ್ಕು ಇದ್ದೂ ತನ್ನ ಗಮನಕ್ಕೆ ತರದೇ ಸದರಿ ಕ್ರಯ ವ್ಯವಹಾರ ನಡೆದಿರುವುದರಿಂದ ಪ್ರಸ್ತುತ ಹಕ್ಕುಬದಲಾವಣೆಯನ್ನು ತಡೆಹಿಡಿಯುವಂತೆ ಮನವಿಯನ್ನು ಸಲ್ಲಿಸಿರುತ್ತಾರೆ.

ಉಭಯ ಪಕ್ಷಕಾರರು ದಿನಾಂಕ:29.09.2016 ರ ರಂದು ವಿಚಾರಣೆಗೆ ಹಾಜರಾಗಿ ವ್ಯಾಜ್ಯದ ಜಮೀನಿನ ಕ್ರಯದಾರರಾದ ವಾದಿಗಳಿಗೂ ಹಾಗೂ ಪ್ರತಿವಾದಿಗಳಿಗೂ ಆಂತರಿಕ ವಿವಾದವಿದ್ದು ಉಭಯರ ನಡುವಿನ ಸಮಸ್ಯೆಯು ಗ್ರಾಮದ ಪ್ರಮುಖರ ಸಮಕ್ಷಮದಲ್ಲಿ ಹಾಲೀ ಬಗೆಹರಿದಿರುವುದರಿಂದ ವ್ಯಾಜ್ಯದ ಜಮೀನನ್ನು ಕ್ರಯದಾರರ ಹೆಸರಿಗೆ ಖಾತೆ ಮಾಡಿಕೊಡುವಂತೆ ಉಭಯರು ಒಪ್ಪಿಗೆ ನೀಡಿರುತ್ತಾರೆ.

ಮೇಲ್ಕಂಡ ವಾದಿ ಪ್ರತಿವಾದಿಗಳು ಮಂಡಿಸಿದ ವಾದ ಪ್ರತಿವಾದವನ್ನು ಆಲಿಸಲಾಗಿ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1. ವ್ಯಾಜ್ಯದ ಜಮೀನಿನ ಪಹಣಿ ಪತ್ರಿಕೆಯನ್ನು ಪರಿಶೀಲಿಸಲಾಗಿ 1. ಶ್ರೀ ಟಿ.ತಿಪ್ಪಣ್ಣ ತಂದೆ ಲೇಟ್ ಟಿ ಹನುಮಂತಪ್ಪ 2. ಟಿ.ದೊಡ್ಡಬಸಪ್ಪ, ತಂದೆ ಲೇಟ್ ಟಿ ಹನುಮಂತಪ್ಪ 3. ಟಿ.ಮಂಜಪ್ಪ ತಂದೆ ಲೇಟ್ ಟಿ ಹನುಮಂತಪ್ಪ ಮತ್ತು 4. ಟಿ ಪಕ್ಕೀರಜ್ಜ ತಂದೆ ಲೇಟ್ ಟಿ ಹನುಮಂತಪ್ಪ ಇವರುಗಳು ಒಟ್ಟು ವಿಸ್ತೀರ್ಣ 5.30 ಎಕರೆ ಜಮೀನಿಗೆ ಜಂಟಿ ಪಟ್ಟಾದಾರರಿರುವುದು ಕಂಡುಬಂದಿರುತ್ತದೆ.
2. ನೊಂದಣಿ ದಸ್ತಾವೇಜು ಸಂಖ್ಯೆ 494/2016-17 ದಿನಾಂಕ:13.05.2016 ರ ಮೇರೆಗೆ ವ್ಯಾಜ್ಯದ ಜಮೀನಿನ ಒಟ್ಟು ವಿಸ್ತೀರ್ಣ 5.30 ಎಕರೆ ಪೈಕಿ ವಿಸ್ತೀರ್ಣ 2.30 ಎಕರೆ ಜಮೀನನ್ನು ವಾದಿಗಳಿಗೆ ಕ್ರಯಕ್ಕೆ ನೀಡಿರುವುದಾಗಿ ಕಂಡುಬಂದಿರುತ್ತದೆ.
3. ಪ್ರತಿವಾದಿಗಳ ಗಂಡನಾದ ಟಿ.ತಿಪ್ಪಣ್ಣ ತಂದೆ ಲೇಟ್ ಟಿ ಹನುಮಂತಪ್ಪ ಇವರು ದಿನಾಂಕ:15.06.2016 ರ ರಂದು ಮರಣ ಹೊಂದಿರುವುದಾಗಿ ಮರಣ ಪ್ರಮಾಣ ಪತ್ರದ ಮೇರೆಗೆ ಕಂಡುಬಂದಿದ್ದು ಸದರಿಯುವರೂ ಸಹ ವ್ಯಾಜ್ಯದ ಜಮೀನಿನ ಜಂಟಿ ಖಾತಾದಾರರಾಗಿರುವುದು ಕಂಡುಬಂದಿರುತ್ತದೆ.
4. ವ್ಯಾಜ್ಯದ ಜಮೀನಿನ ಡಯಾಗ್ಲಾಟ್ ಪ್ರತಿಯನ್ನು ಪರಿಶೀಲಿಸಲಾಗಿ ಸದರಿ ಜಮೀನು ಪಟ್ಟಾ ಜಮೀನಾಗಿರುವುದು ಕಂಡುಬಂದಿರುತ್ತದೆ.
5. ಕ್ರಯದಾರರು ಕೃಷಿಕರೆಂಬುದಕ್ಕೆ ಸದರಿಯವರ ಹೆಸರಿನಲ್ಲಿರುವ ಹಬೊ ಹಳ್ಳಿ ತಾಲೂಕು ಶೀಗೇನಹಳ್ಳಿ ಕಂದಾಯ ಗ್ರಾಮದ ಜಮೀನಿನ ಸ.ನಂ.155/1 ವಿಸ್ತೀರ್ಣ 2.47 ಎಕರೆ ಜಮೀನಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ.
6. ವ್ಯಾಜ್ಯದ ಜಮೀನಿನ ಕ್ರಯದಾರರಾದ ವಾದಿಗಳು RD0038487019776 ರಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಸದರಿ ಪ್ರಮಾಣ ಪತ್ರದ ಮೇರೆಗೆ ವಾದಿಗಳ ಕುಟುಂಬ ವಾರ್ಷಿಕ ಆದಾಯವು ರೂ 25,000/- ಇರುವುದಾಗಿ ಕಂಡುಬಂದಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣನೆಗೆ ತಗೆದುಕೊಂಡು ವ್ಯಾಜ್ಯದ ಜಮೀನನ್ನು ಕ್ರಯ ನೊಂದಣಿ ದಸ್ತಾವೇಜು ಸಂಖ್ಯೆ 494/2016-17 ದಿನಾಂಕ:13.05.2016 ರ ಮೇರೆಗೆ ಕ್ರಯದಾರರಾದ ವಾದಿಗಳ ಹೆಸರಿಗೆ ಖಾತೆ ಮಾಡುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಶೀಗೇನಹಳ್ಳಿ ಗ್ರಾಮದ ಸ.ನಂ.150/ಬಿ ಪೈಕಿ ವಿಸ್ತೀರ್ಣ 2.30 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕ್ರಯ ನೊಂದಣಿ ದಸ್ತಾವೇಜು ಸಂಖ್ಯೆ 494/2016-17 ದಿನಾಂಕ:13.05.2016 ರ ಮೇರೆಗೆ ಕ್ರಯದಾರರಾದ ಡಂಬ್ರಹಳ್ಳಿ ಶಂಕ್ರಗೌಡ ತಂದೆ ಡಿ. ನಿಂಗನಗೌಡ ಇವರ ಹೆಸರಿಗೆ ಖಾತೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 27.10.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

G. Ningappa
9/11/16

27/10

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

10/11/16